ಕಚೇರಿಯೊಂದರ ಮಹಿಳಾ ಸಿಬ್ಬಂದಿ ತನ್ನ ಪುರುಷ ಸಹಸಿಬ್ಬಂದಿಗಳೊಂದಿಗೆ ಇರುವಂಥ ಸಾಮಾನ್ಯ ಸಂಬಂಧವಿತ್ತು. ಆದರೆ ರಿತಿಕ್ ಗಂಭೀರವಾಗಿ ಹೇಳಿದ ವ್ಯಂಗ್ಯಗಳು, ಅವರ ಬಗ್ಗೆ ಅಸಹಜತೆಯನ್ನು ಅನುಭವಿಸುವಂತೆ ಮಾಡಿದವು. ನಾನೀಗ ಅವರು ನನ್ನ ಬಗ್ಗೆ ತೋರುವ ವ್ಯವಹಾರಗಳನ್ನು ಅನುಮಾನದಿಂದ ನೋಡುತ್ತೇನೆ; ಅವರ ಬಗ್ಗೆ ನನ್ನ ವ್ಯವಹಾರ ಸಹ ಹೆಚ್ಚಿನ ಔದಾರ್ಯವಲ್ಲ ತಾನೇ? ಅಥವಾ ಅವರು ನನ್ನಿಂದ ಲಾಭ ಪಡೆಯುವ ಕುಚೇಷ್ಟೆಯನ್ನು ಮಾಡುತ್ತಿಲ್ಲ ತಾನೇ?

ಓಹ್! ನಾನು ಬಹುಶಃ ಮನೋರೋಗವೊಂದರಿಂದ ಗ್ರಸ್ತಳಾಗಿದ್ದೇನೆ. ಇಲ್ಲ, ನಾನು ಹೀಗೆ ರೋಗಿಯಾಗಿ ಬದುಕಬೇಕಿಲ್ಲ. ನಾನು ಈ ರೋಗದಿಂದ ಮುಕ್ತಿ ಪಡೆಯಬೇಕಾಗುವುದು, ಅದೂ ಯಾವುದೇ ಆಸ್ಪತ್ರೆಯ ಸಹಕಾರವಿಲ್ಲದೆ ಮುಕ್ತಿ ಪಡೆಯಬೇಕಾಗುವುದು. ನಾನೇ ಖುದ್ದು ಏನಾದರು ಮಾಡಬೇಕಾಗುವುದು. ಅವನು ನನ್ನ ಹಿಂದಿನ 'ಕೆಲವು' ರೂಪಗಳನ್ನು ಮರಳಿಸಿದರೆ... ಇದು ವಾಸ್ತವವಾಗಿ ಸಂಭವವೇ? ಎಲ್ಲವೂ ಈ ಮೊದಲಿನಂತಾಗುವುದೇ? ಇಲ್ಲ, ಜೀವನವನ್ನು ಎಂದೂ ರಿವೈಂಡ್ ಮಾಡಲಾಗದು, ಟೈಮ್ ಮಶೀನ್‌ನಂಥ ಯಂತ್ರದಲ್ಲಿ ಕೂತು ಅತೀತಕ್ಕೆ ಹೋಗುವಂಥ ಯಂತ್ರ ಹಾಗೂ ಭವಿಷ್ಯವನ್ನು ಬದಲಿಸಲು ಅತೀತದ ಹರಿದ ಪುಟಗಳನ್ನು ಅಂಟಿಸಿ ದುರಸ್ತಿ ಮಾಡುವಂಥ ಯಂತ್ರಗಳೂ ಇಲ್ಲ. ಜೀವನ ತನ್ನನ್ನೆಂದೂ ಪುನರುಚ್ಚಿಸುವುದಿಲ್ಲ. ನನ್ನ ಜೀವನ ಸಹ ನನ್ನನ್ನು ನನಗೆ ಪುನರುಚ್ಚಿಸುವುದಿಲ್ಲ. ಚಪ್ಪಾಳೆ ಎರಡೂ ಕೈಗಳಿಂದ ಸಾಧ್ಯ ಎಂಬುದು ಸತ್ಯ. ಜಗಳ ಸಹ ಇಬ್ಬರ ನಡುವೆ ಪರಸ್ಪರ ಸಮಾನ ವಾದಪ್ರತಿವಾದದ ಪರಿಣಾಮದಿಂದಾಗುತ್ತವೆ. ನಮ್ಮ ನಡುವೆ ಸಹ ಹೀಗೆಯೇ ಆಯಿತು. ಕೆಲವು ವ್ಯಂಗ್ಯದ ಮಾತುಗಳನ್ನು ರಿತಿಕ್ ಹೇಳಿದ, ಕೆಲವು ವ್ಯಂಗ್ಯದ ಮಾತುಗಳನ್ನು ನಾನು ಹೇಳಿದೆ. ಆ ಕ್ಷಣ ನಾವು, ವಿಷಯ ಎಲ್ಲಿಂದ ಎಲ್ಲಿಗೆ ಹೋಗುವುದೆಂದು ಯೋಚಿಸಿರಲಿಲ್ಲ. ಜಗಳ ಮಾಡುವ ಪ್ರತಿಯೊಬ್ಬರು ತಮ್ಮ ಗೆಲುವಿನ ಬಗ್ಗೆಯೇ ದೃಢ ನಿಲುವನ್ನು ಹೊಂದಿರುತ್ತಾರೆ; ಈ ಭ್ರಮೆಯಲ್ಲಿ ಪ್ರಹಾರದ ಮೇಲೆ ಪ್ರಹಾರವೆಸಗುತ್ತಾರೆ.

ನನ್ನ ಮಿತ್ರರ ಬಗ್ಗೆ ನನಗೆ ವ್ಯಂಗ್ಯದ ಮಾತುಗಳನ್ನು ಹೇಳುತ್ತಿದ್ದ ರಿತಿಕ್‌ನ ಅಭ್ಯಾಸಗಳು ಹೊಸತೇನೂ ಅಲ್ಲ. ನಮ್ಮ ನಡುವೆ ಅಂತರಂಗ ಎಂಬುದು ಇರದಿದ್ದಾಗ, ಆಗಲೂ ರಿತಿಕ್ ಬಂದು ಹೋಗುವಾಗ, 'ಆ ವ್ಯಕ್ತಿ ಸರಿಯಿಲ್ಲ, ಅವನಿಂದ ದೂರವಿರು' ಎಂದು ಅಡ್ಡಿಪಡಿಸುತ್ತಿದ್ದ.

'... ಅವನ' ಬಗ್ಗೆ ನೀವೇನೂ ತಿಳಿಯದಿದ್ದಾಗ, ಅವನೊಂದಿಗೆ ಹೀಗೆ ಮುಗುಳ್ನಗುತ್ತಾ ಏಕೆ ಮಾತನಾಡುತ್ತೀರ? ಇದು ಭ್ರಮೆಗೆ ಕಾರಣವಾಗುವುದಿಲ್ಲವೇ! ಒಂದು ಬಾರಿ ರಿತಿಕ್‌ನಿಂದ ಇಂಥ ಉಪದೇಶವನ್ನು ಕೇಳಿ ನಾನು ಮೌನದಿಂದ ಇರದಾಗಿದ್ದೆ.

'ನಿಮ್ಮ ಬಗ್ಗೆ ಸಹ ನನಗೇನೂ ತಿಳಿದಿಲ್ಲ' ನಾನು ನಕ್ಕು ಹೇಳಿದ್ದೆ.

'ನನ್ನ ಬಗ್ಗೆ ಸಹ ಎಚ್ಚರಿಕೆಯಿಂದಿರಿ. ನನ್ನೊಂದಿಗೆ ಮಾತನಾಡುವಾಗ ಮುಗುಳ್ನಗಬೇಡಿ' ರಿತಿಕ್‌ನ ಮಾತಿನಿಂದ ನಾನು ನಕ್ಕಿದ್ದೆ.

ಈಗ ನನಗೆ, ನಾನು ಅವನ ಬಗ್ಗೆ ಎಚ್ಚರಿಕೆಯಿಂದ ಇರಬೇಕಿತ್ತು ಎಂದು ಅನ್ನಿಸುತ್ತದೆ. ರಿತಿಕ್ ಮತ್ತು ಅವನ ಮನಸ್ಸನ್ನು ಚೆನ್ನಾಗಿ ಪರೀಕ್ಷಿಸಬೇಕಿತ್ತು, ಆದರೆ ಆಗ ರಿತಿಕ್‌ನ ಜಾದೂ ನನ್ನನ್ನು ಆವರಿಸಿತ್ತು. ಅದೊಂದು ವಿಧದ ಇಂದ್ರಜಾಲದ ಸಮ್ಮೋಹನವಾಗಿತ್ತು, ಅದರಿಂದ ಹೊರ ಬರುವುದು ನನ್ನ ವಶದಲ್ಲಿರಲಿಲ್ಲ. ಆದರೂ ರಿತಿಕ್‌ನ ಈ 'ಗಾರ್ಡಿಯನ್‌ಶಿಪ್' ನನಗೆ ಲೇಶಮಾತ್ರವೂ ಇಷ್ಟವಾಗುವುದಿಲ್ಲ.

'ಮೈಂಡ್ ಯುವರ್ ಬಿಜಿನೆಸ್' ಒಮ್ಮೆ ನಾನು ರಿತಿಕ್‌ನನ್ನು ಗದರಿಸಿದ್ದೆ, 'ನನ್ನ ಗಾರ್ಡಿಯನ್‌ಶಿಪ್ ಮಾಡಲು ನೀವ್ಯಾರು?'

'ಯುವರ್ ವೆಲ್‌ವಿಶರ್!' ರಿತಿಕ್ ಕೂಡಲೇ ಹೇಳಿದ್ದ.

ನಾನು ರೇಗಿದ್ದೆ.

'ಇವನು ಒಳಿತನ್ನು ಬಯಸುತ್ತಿದ್ದಾನೋ ಅಥವಾ ಕೆಟ್ಟದ್ದನ್ನು ಬಯಸುತ್ತಿದ್ದಾನೋ? ಯಾವಾಗ ನೋಡಿದರೂ ಅಡ್ಡಿ. ಯಾರೋ ನನ್ನ ಚೇಷ್ಟೆಗಳನ್ನು ಮತ್ತು ನಾನು ಬಂದುಹೋಗುವುದನ್ನು ಗಮನಿಸುತ್ತಿದ್ದಾರೆ ಎಂದು ಯೋಚಿಸಿದಾಗ ನನಗೆ ಉಸಿರುಗಟ್ಟಿದಂತಾಗುತ್ತದೆ. ನಾನು ರಿತಿಕ್‌ಗೆ ಕಡ್ಡಿ ಮುರಿದಂತೆ ಹೇಳಿದ್ದೆ.

'ಸರಿ, ಒಂದು ವೇಳೆ ನಿಮಗೆ ಕೆಡುಕೆನಿಸಿದರೆ, ನಿಮ್ಮನ್ನು ಯಾರು ಕೆಟ್ಟ ದೃಷ್ಟಿಯಿಂದ ನೋಡುತ್ತಾರೆ, ಯಾರು ಒಳ್ಳೆಯ ದೃಷ್ಟಿಯಿಂದ ನೋಡುತ್ತಾರೆಂದು ನಿಮಗೆ ಹೇಳುವುದಿಲ್ಲ' ರಿತಿಕ್ ಬೇಸರದಿಂದ ಹೇಳಿದ್ದ.

'ಇದು ಸರಿಯಾದದ್ದು' ನಾನು ಸಹ ಅವನ ಮಾತಿಗೆ ಮುದ್ರೆಯನ್ನು ಒತ್ತಿದ್ದೆ. ಬಹುಶಃ ನಾನು ರಿತಿಕ್‌ನನ್ನು ನೋಡಲು ಇಷ್ಟವೂ ಪಡುತ್ತಿರಲಿಲ್ಲ, ಆದರೆ ಅದೊಂದು ದಿನ ನಾನು ಮಳೆಯಲ್ಲಿ ನೆನೆಯುತ್ತಾ ಪೆಡಲ್‌ರಿಕ್ಷಾವನ್ನು ನಿರೀಕ್ಷಿಸುತ್ತಿದ್ದೆ; ಆ ಗಳಿಗೆ ನನ್ನ ಜೀವನದ ನಿರ್ಣಾಯಕ ಗಳಿಗೆಯಾಗುವುದರಲ್ಲಿತ್ತು. ನಾನು ಸಂಜೆ ಐದುಮುಕ್ಕಾಲು ಗಂಟೆಗೆ ಕಚೇರಿಯಿಂದ ಹೊರಟಿದ್ದೆ. ಚಳಿಗಾಲದ ಸಂಜೆಗಳು ಬೇಗನೆ ಬರುತ್ತವೆ. ಅಂಧಕಾರ ಕವಿಯುತ್ತಿತ್ತು. ಆಗಸದಲ್ಲಿ ಹರಡಿದ್ದ ಕಪ್ಪು ಮೋಡಗಳು ಅಂಧಕಾರವನ್ನು ಇನ್ನಷ್ಟು ದಟ್ಟಗೊಳಿಸಿತ್ತು. ರಸ್ತೆಯ ದೀಪಗಳು ಹೊತ್ತಿದ್ದವು, ಇದರಿಂದ ರಾತ್ರಿ ದಟ್ಟವಾಗುತ್ತಿದೆ ಎಂಬ ಅರಿವಾಗುತ್ತಿತ್ತು. ಇಂಥ ವಾತಾವರಣ ನನ್ನ ಮನಸ್ಸನ್ನು ಬೇಸರಗೊಳಿಸುತ್ತದೆ. ತಣ್ಣನೆಯ ರಾತ್ರಿಗಳು ನನ್ನ ಮೆದುಳಿನಲ್ಲಿ ಉದಾಸೀನತೆಯನ್ನು ತುಂಬುತ್ತವೆ. ನಾನು ಮನೆಯಲ್ಲಿಯೂ ತಡರಾತ್ರಿಯವರೆಗೆ ಲೈಟ್ ಹಾಕಿರುತ್ತೇನೆ. ಉದಾಸೀನತೆ, ವಿಷಾದದಿಂದ ಪಾರಾಗಲು ತೀಕ್ಷ್ಣ ಬೆಳಕಿನಲ್ಲಿರಬೇಕು, ಹಾಡುಗಳನ್ನು ಕೇಳಬೇಕು ಅಥವಾ ನಮ್ಮನ್ನು ನಾವು ಮರೆಯುವಂಥ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ನಾನೆಲ್ಲೋ ಓದಿದ್ದೆ. ನಾನು ಕಚೇರಿಯಿಂದ ಮರಳಿ ಬಂದ ನಂತರ ಒಮ್ಮೊಮ್ಮೆ ಲೇಖನಗಳನ್ನು ಬರೆಯುತ್ತಿದ್ದೆ. ರೇಡಿಯೊದಲ್ಲಿ ಬರುವ ಹಳೆಯ ಹಾಡುಗಳು ನನ್ನನ್ನು ಇನ್ನಷ್ಟು 'ಡಿಪ್ರೆಸ್' ಮಾಡುತ್ತವೆ.

ನಾನು ಸ್ಥಳೀಯ ಪತ್ರಿಕೆಗಳಲ್ಲಿ ನನ್ನ ಲೇಖನಗಳನ್ನು ಪ್ರಕಟಣೆಗೆ ಸಹ ಕೊಡುತ್ತಿದ್ದೆ. ಆ ದಿನಗಳಲ್ಲಿ ಜಬಲಪುರದಲ್ಲಿ ಅನೇಕ ಸಮಾಚಾರ ಪತ್ರಿಕೆಗಳು ಪ್ರಕಟಗೊಳ್ಳುತ್ತಿದ್ದವು. ಆಗ ಛತ್ತೀಸಗಢ್, ಮಧ್ಯಪ್ರದೇಶ ರಾಜ್ಯದಿಂದ ಪ್ರತ್ಯೇಕಗೊಂಡಿತ್ತು. ಛತ್ತೀಸಗಢದವರಾದ ನನ್ನ ಕಚೇರಿಯ ಕೆಲವರು, ಪ್ರತ್ಯೇಕ ರಾಜ್ಯವಾದ ನಂತರ ಅಲ್ಲಿಯೇ ವಾಸಿಸಲು ಬಯಸುತ್ತಿದ್ದರು, ಹೀಗಾಗಿ ವರ್ಗಾವಣೆ ಮಾಡಿಸಿಕೊಂಡಿದ್ದರು. ಅವರಲ್ಲಿ ಮೃದುಲ್ ಸಹ ಒಬ್ಬನಾಗಿದ್ದ, ಅವನು ನನ್ನ ಲೇಖನಗಳನ್ನು ಪ್ರಶಂಸಿಸುತ್ತಿದ್ದ; ಅವನು ಕಚೇರಿಯಿಂದ ಮರಳಿ ಬರುವಾಗ, ಸ್ವಾರ್ಥವಿಲ್ಲದೆ ಒಮ್ಮೊಮ್ಮೆ ನನ್ನನ್ನು ತನ್ನ ಬೈಕ್‌ನಲ್ಲಿ ಕೂರಿಸಿಕೊಂಡು ನನ್ನ ಮನೆಗೆ ಬಿಡುತ್ತಿದ್ದ. ನನ್ನ ಆಗಿನ ಲೇಖನಗಳು ಅಪರಿಪಕ್ವವಾಗಿರುತ್ತಿದ್ದವು ಎಂದು ಈಗ ನನಗೆ ಅನ್ನಿಸುತ್ತದೆ, ಆದರೂ ಮೃದುಲ್ ಅವುಗಳನ್ನು ಹೊಗಳಿ ನನ್ನ ಉತ್ಸಾಹವನ್ನು ಹೆಚ್ಚಿಸುತ್ತಿದ್ದ. ನಾನು ಸಾಮಾನ್ಯವಾಗಿ ನನ್ನ ಲೇಖನಗಳಲ್ಲಿ ಮಹಿಳೆಯ ಸಾಮಾಜಿಕ ಸ್ವಾತಂತ್ರ್ಯದ ಬಗ್ಗೆ ಬರೆಯುತ್ತಿದ್ದೆ, ಇದಕ್ಕೆ ಅವನು ಒಮ್ಮೆ, 'ನೀವು ಸಿಮೋನ್ ಹಾಗೆ' ಎಂದು ಟಿಪ್ಪಣಿ ಮಾಡಿದ್ದ.

'ಸಿಮೋನ್ ಯಾರು?' ನಾನು ಕೇಳಿದ್ದೆ.

'ಸಿಮೋನ್ ಇದ್ದಳು, ಈಗಿಲ್ಲ. ಅವಳು ಫ್ರೆಂಚ್ ಲೇಖಕಿಯಾಗಿದ್ದು, ಪ್ಯಾರಿಸ್‌ನಲ್ಲಿ ಹುಟ್ಟಿದ್ದಳು. ಅವಳು ದಾರ್ಶನಿಕ, ರಾಜಕೀಯ ಮತ್ತು ಇನ್ನಿತರ ಸಾಮಾಜಿಕ ವಿಷಯಗಳಲ್ಲಿ ಪುಸ್ತಕಗಳನ್ನು ಬರೆದಳು. ಇವುಗಳಲ್ಲಿ 'ದ ಸೆಕೆಂಡ್ ಸೆಕ್ಸ್' ಹೆಚ್ಚು ಚರ್ಚೆಗೆ ಒಳಗಾಯಿತು. ಅವಳು ಆ ಪುಸ್ತಕದಲ್ಲಿ ಹೆಣ್ಣಿನ ಶರೀರ ಮತ್ತು ಮನಸ್ಸಿನ ಬಗ್ಗೆ, ಪಿತೃ ಅಧಿಕಾರದಿಂದ ಮಾಡಲಾದ ಎಲ್ಲಾ ಮಿಥಿಕ್‌ಗಳು ಮತ್ತು ಪಾರಂಪರಿಕ ನಂಬಿಕೆಗಳನ್ನು ಬಹಿರಂಗವಾಗಿ ಚಾಲೆಂಜ್ ಮಾಡಿದಳು. ಅವಳು, ಹೆಣ್ಣು ಹುಟ್ಟುವುದಿಲ್ಲ, ಪ್ರತಿಯಾಗಿ ಮಾಡಲ್ಪಡುತ್ತಾಳೆ ಎಂದು ಸಾಬೀತು ಮಾಡಿದಳು' ಹೀಗೆಂದು ಮೃದುಲ್ ಹೇಳಿದ್ದ.

ಆಗ ನನಗೆ ಸಿಮೋನ್ ವಿಚಾರಗಳು ಸರಿಯಾಗಿ ಅರ್ಥವಾಗಿರಲಿಲ್ಲ. ಆದರೆ ಅವಳು ತುಂಬಾ ಧೈರ್ಯವಂತ ಮಹಿಳೆಯಾಗಿದ್ದಳು. ಅವಳು 'ಸೆಕೆಂಡ್ ಸೆಕ್ಸ್' ಎಂಬ ಹೆಸರಿನಲ್ಲಿ ಪುಸ್ತಕ ಬರೆಯುವ ಧೈರ್ಯ ಮಾಡಿದಳು ಎಂಬುದು ಅರ್ಥವಾಗಿತ್ತು. ಇದು ವಾಸ್ತವವಾಗಿಯೂ ದೊಡ್ಡ ಸಂಗತಿಯಾಗಿತ್ತು. ನಾನು ಅವಳ ಬಗ್ಗೆ ಓದಬೇಕು ಎಂದು ಯೋಚಿಸಿದೆ. ಆದರೆ ಓದದಾದೆ. ಇದಕ್ಕೆ ಅತಿ ಮುಖ್ಯ ಕಾರಣವೆಂದರೆ, ನಾನು ಆ ಪುಸ್ತಕವನ್ನು, ಪುಸ್ತಕದ ಟೈಟಲ್‌ನಿಂದಾಗಿ ಮೃದುಲ್‌ನಿಂದ ಯಾಚಿಸುವ ಸಾಹಸ ಮಾಡದಾದೆ. ಅವನೇನು ಯೋಚಿಸುವನೋ? ಬಹುಶಃ ನನಗೆ ಸೆಕ್ಸ್ ಬಗ್ಗೆ ಓದುವುದರಲ್ಲಿ ಆಸಕ್ತಿಯಿದೆ ಎಂದು ತಿಳಿಯಬಹುದು.

ಮೃದುಲ್‌ಗೆ ಓದುವ ಅಭ್ಯಾಸವಿತ್ತು, ಅವನು